
ಗಿಳಿ ಮಾತನಾಡತೊಡಗಿತು. ‘ಈಗಿಂದೀಗಲೆ ನೀನು ನಿನ್ನ ಒಂದು ನೂರು ರಾಣಿಯರ ಜೊತೆಗೂಡಿ ಅರಮನೆ ತೊರೆಯಬೇಕು. ಅರಮನೆಯಿಂದ ಮೂರು ಯೋಜನ ದೂರದಲ್ಲಿರುವ ಬಟಾಬಯಲಿನಲ್ಲಿ ಸಂಸಾರ ಹೂಡಬೇಕು. ಅದೊಂದು ಬೀಳುಬಿದ್ದ ಜಾಗ. ಅಲ್ಲಿ ಮರಗಿಡಗಳ ಸುಳಿವಿಲ್ಲ, ಹಕ್ಕಿ ಪಕ್ಷಿಗಳು ಮೊದಲೇ ಇಲ್ಲ, ಹಾವು, ಹಾವುರಾಣಿ, ಅಂಟಿಗೊದ್ದ, ಚಿಟ್ಟೆ, ಇರುವೆ, ಗೆದ್ದಲು, ಎರೆಹುಳು ಇಲ್ಲವೇ ಇಲ್ಲ. ಅಲ್ಲಿ ನೀನು ಸಂಸಾರ ಹೂಡಿ, ನಿನ್ನ ರಾಣಿಯರ ಹೆಗಲಿಗೆ ನೊಗ ಕಟ್ಟಿ ನೀನೇ ಸ್ವಂತ ನೆಲ ಉಳಬೇಕು. ಬಯಲನ್ನು ಹಸನು ಮಾಡಬೇಕು. ಮಾವು, ಬೇವು, ಆಲ, ಅರಳಿ, ನೆಲ್ಲಿ, ನುಗ್ಗೆ, ಸೀಗೆ, ಬಾಗೆ, ಕಾರೆ, ಕಗ್ಗಲಿ, ಮಲ್ಲಿಗೆ, ಸಂಪಿಗೆ, ಜಾಜಿ, ಇರುವಂತಿಗೆ, ಬೇಲ, ಬಿಕ್ಕೆ, ನೇರಳೆ, ನಿಂಬೆ, ಹಲಸು, ತೂಪುರ, ಬೇಲ, ಬಿಲ್ವ ಮುಂತಾಗಿ ಸಾವಿರದ ಒಂದು ಜಾತಿಯ ಮರಗಳನ್ನು ಬೆಳೆಯಬೇಕು. ಆ ಮರಗಳ ಹೂ, ಹಣ್ಣುಗಳನ್ನು ಹುಡುಕಿಕೊಂಡು ಗಿಳಿ ಗೌಜುಗ... ಮುಂತಾದ ಹಕ್ಕಿ ಪಕ್ಷಿಗಳು ಹಾರುತ್ತಾ ಕೂರುತ್ತಾ ಬರಬೇಕು. ಜೇನು, ಇರುವೆ, ಗೆದ್ದಲು ಮುಂತಾದ ನೂರೆಂಟು ಬಗೆಯ ಜೀವ ಜಂತುಗಳು ಹರಿದಾಡಿ ನಲಿದಾಡಿ ಅಲ್ಲಿರಬೇಕು. ಮರಬಿಡುವ ಚಿಗುರೆಲೆ ಕಾಯಿ ಹಣ್ಣುಗಳನ್ನು ತಿಂದು ಬಣ್ಣದ ಚಿತ್ತಾರದ ಹಕ್ಕಿ ಪಕ್ಷಿಗಳು ಸ್ವರಗೈಯ್ಯಬೇಕು. ಆ ಹಕ್ಕಿಗಳ ಸ್ವರವೇ ನಿನಗೆ ಆಶೀರ್ವಾದ. ಆಗ ನಿನ್ನ ಹುಣ್ಣು ತಾನಾಗೇ ಮಾಯುತ್ತದೆ, ಮಾಯವಾಗುತ್ತದೆ ಎಂದು ಮಾತನಾಡುವ ಗಿಳಿ ಶಕುನ ನುಡಿಯುತ್ತಿದ್ದಂತೆ ಗಿಳಿಯೊಂದಿಗೆ ಆ ವಿಚಿತ್ರ ಮನುಷ್ಯನೂ ಮಾಯವಾದ. ಇರುವವರೆಗೆ ಮಿರ್ರನೆ ಮಿರುಗುತ್ತಿದ್ದ ರಾಜನ ಅಂತಃಪುರ, ಅವನು ಮಾಯವಾಗುತ್ತಿದ್ದಂತೆ ಕತ್ತಲು ಕವಿದಂತಾಗಿ ಮಸುಕಾಯಿತು. ಮಸುಕು ಹೆಚ್ಚಾಗುತ್ತಾ ಕತ್ತಲಾಗುತ್ತಿದ್ದಂತೆ ರಾಜನ ಬೆನ್ನು ನೋವು ಯಥಾಪ್ರಕಾರವಾಗಿ ಹೆಚ್ಚಾಗತೊಡಗಿತು.



ರಾಜನ ಅಪಾರ ಸಂಪತ್ತು ಪ್ರಯೋಜನಕ್ಕೆ ಬರಲಿಲ್ಲ. ಎಲ್ಲಾ ಸಂಪತ್ತಿಗಿಂತ ಆರೋಗ್ಯವೇ ಮುಖ್ಯ, ಆರೋಗ್ಯಭಾಗ್ಯವೇ ನಿಜವಾದ ಭಾಗ್ಯ ಎಂದು ಅರಿತ ರಾಜ ಹೇಗಾದರೂ ಮಾಡಿ ಜೀವ ಉಳಿಸಿಕೊಳ್ಳಲೇಬೇಕು ಎಂದು ನಿರ್ಧರಿಸಿದ. ವಿಚಿತ್ರ ಮನುಷ್ಯನ ಗಿಳಿ ಹೇಳಿದಂತೆ ತನ್ನ ನೂರು ಹೆಂಡತಿಯರ ಜೊತೆ ಬೀಳು ಬಯಲಿಗೆ ಹೊರಟ. ರಾಜ್ಯವನ್ನು ಮಂತ್ರಿಗೆ ವಹಿಸಿ ಅರಮನೆಯಿಂದ ಜೋಪಡಿಗೆ ಹೊರಟ ರಾಜನ ಹಿಂದೆ ಯಾರೂ ಬರಲಿಲ್ಲ. ನಾಡಿನ ಜನತೆ ಈ ದುಷ್ಟ ದೊರೆಗೆ ಸರಿಯಾದದ್ದೇ ಆಯಿತು ಎಂದು ಶಪಿಸಿದರು. ಏಳು ಹಗಲು ಏಳು ರಾತ್ರಿ ನಡೆದು ಬೀಳು ಬಯಲಿಗೆ ಬರುವ ದಾರಿಯಲ್ಲಿ ಬರ ಬಿದ್ದು ನಲುಗಿ ಹೋಗಿದ್ದ ಬರಡು ಭೂಮಿಯನ್ನು ಕಂಡ. ಹೊಟ್ಟೆಗೆ ಅನ್ನವಿಲ್ಲದೆ ಸೊರಗಿ ಹೋಗಿದ್ದ ಜನತೆಯನ್ನು ನೋಡಿದ. ನೀರು ನೆರಳು ಇಲ್ಲದೆ ಬಿಸಿಲ ಬೇಗೆಯಷ್ಟೇ ತುಂಬಿದ್ದ ಬಟಾಬಯಲಿನಲ್ಲಿ ನಡೆದು ಸುಸ್ತಾಗಿ ಏಳನೇ ದಿನದ ರಾತ್ರಿಗೆ ಗಿಳಿ ಸೂಚಿಸಿದ್ದ ಜಾಗಕ್ಕೆ ಬಂದು ಸೇರಿದ. ಸುತ್ತಲ ಹಳ್ಳಿಗಳ ರೈತರಿಂದ ನೇಗಿಲು ನೊಗಗಳನ್ನು ಕಡಕ್ಕೆ ಪಡೆದ. ಕಮ್ಮಾರರಿಂದ ನೇಗಿಲ ಗುಳಗಳನ್ನು, ಗುದ್ದಲಿ ಹಾರೆಗಳನ್ನು ಬೇಡಿ ಪಡೆದ. ದಿನಕ್ಕೆ ಇಬ್ಬರು ರಾಣಿಯರಂತೆ ಗೊತ್ತು ಮಾಡಿ ಅವರ ಹೆಗಲಿಗೆ ನೊಗ ಕಟ್ಟಿ ಉಳಲು ಪ್ರಾರಂಭಿಸಿದ. ಅವನು ಉಳಲು ಆರಂಭಿಸಿದ್ದೇ ತಡ ಆಕಾಶದಲ್ಲಿ ಮೋಡ